**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# C.C.No.526/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕೆ.ಎಂ.ಮಲಿಯಪ್ಪ | CW-02 |
| ತಂದೆಯ /ಗಂಡನ ಹೆಸರು | : | ಲೇ. ಮಾದಯ್ಯ | PW-01 |
| ವಯಸ್ಸು | : | 48 ವರ್ಷ | - |
| ಉದ್ಯೋಗ | : | Head constable | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **21.12.2022.** |
| ವಾಸಸ್ಥಳ | : | ಹೆಚ್.ಡಿ.ಕೋಟೆ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ದಿನಾಂಕ 06.03.2017 ರಿಂದ 20.07.2019 ರವರೆಗೆ ಸರಗೂರು ಪೊಲೀಸ್ ಠಾಣೆಯಲ್ಲಿ HC 312 ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 21.01.2019 ರಂದು ಚಾಸಾ-1 ರವರು ಚಾಸಾ-3 ಮತ್ತು ನನಗೂ ಸುಮಾರು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಇಲಾಖಾ ಜೀಪ್ ನಂಬರ್ ಕೆಎ 55 ಜಿ 6 ರಲ್ಲಿ ಕಟ್ಟೆಹುಣಸೂರು, ಕಲ್ಲಂಬಾಳು , ಹಂಚಿಪುರ ಗ್ರಾಮಗಳ ಕಡೆಗೆ ಗಸ್ತಿಗೆ ಹೋಗಿದ್ದು ಗಸ್ತು ಮುಗಿಸಿಕೊಂಡು ಬರುತ್ತಿರುವ ಸಮಯದಲ್ಲಿ ಸಂಜೆ 4.00 ಗಂಟೆ ಸಮಯದಲ್ಲಿ ಕುಂದೂರು ಮಾರಮ್ಮನ ದೇವಸ್ಥಾನದಲ್ಲಿ ಇಲಾಖಾ ಜೀಪನ್ನು ನೋಡಿ ಒಬ್ಬ ವ್ಯಕ್ತಿ ಸ್ಪ್ಲೆಂಡರ್ ಪ್ಲಸ್ ಕೆಎ 45 ವೈ 8734 ಬರುತ್ತಿದ್ದು ನಮ್ಮನ್ನು ನೋಡಿ ಓಡಲು ಪ್ರಯತ್ನಿಸುತ್ತಿದ್ದು ನಾನು ಚಾಸಾ-1 ಮತ್ತು 3 ರವರು ಆತನನ್ನು ಸುತ್ತುವರೆದು ಹಿಡಿದು ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಪ್ಲಾಸ್ಟಿಕ್ ಚೀಲವಿದ್ದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಎಂಎಲ್ ನ 76 ವಿಂಡ್ಸರ್ ಡಿಲಕ್ಸ ವಿಸ್ಕಿ ಪೌಚುಗಳು ಇದ್ದದ್ದು ಕಂಡು ಬಂದಿರುತ್ತವೆ. ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ರತ್ನಯ್ಯ ಬಿನ್ ರಾಜೇಗೌಡ ಕುಂದೂರು ಗ್ರಾಮ ಎಂದು ತಿಳಿಸಿದಾಗ ಮದ್ಯದ ಬಗ್ಗೆ ಚಾಸಾ-1 ರವರು ಪರವಾನಗಿ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಗಿ ಇಲ್ಲ ಎಂದು ತಿಳಿದು ಬಂದಿರುತ್ತದೆ. ಸದರಿ ಸಾರಾಯಿ ಪೌಚುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ನಂತರ ಆತನನ್ನು ಬೈಕ್ ಮತ್ತು ಮಾಲುಗಳ ಸಮೇತ ಸಂಜೆ 4.30 ಗಂಟೆ ಸಮಯದಲ್ಲಿ ಠಾಣೆಗೆ ಬಂದು ಚಾಸಾ-10 ರವರ ಮುಂದೆ ಹಾಜರುಪಡಿಸಿರುತ್ತೇವೆ. ಆರೋಪಿತನಿಂದ ವಶಪಡಿಸಿಕೊಂಡ 76 ಸಾರಾಯಿ ಪೌಚುಗಳ ಪೈಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 30 ಪೌಚುಗಳನ್ನು ತೆಗೆದುಕೊಂಡು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ A ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತದೆ. ದಿನಾಂಕ 22.01.2019 ರಂದು ಕುಂದೂರುಗ್ರಾಮದ ಮಾರಮ್ಮನ ದೇವಸ್ಥಾನಕ್ಕೆ ಚಾಸಾ-10 ರವರ ಇರ್ಯಾದೆಯ ಮೇರೆಗೆ ನನ್ನ ಹಾಗೂ ಚಾಸಾ-6 ಮತ್ತು 7 ರವರ ಸಮಕ್ಷಮ ಮಹಜರ್ ಕ್ರಮವನ್ನು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಸ್ಥಳ ಮಹಜರ್ ಕ್ರಮ ಜರುಗಿಸಿ ನಾನು ಮತ್ತು ಚಾಸಾ-6 ಮತ್ತು 7 ರವರು ಸ್ಥಳದಲ್ಲಿ ಸಹಿ ಮಾಡಿರುತ್ತೇವೆ. ಸ್ಥಳ ಮಹಜರ್ ನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು

ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಗೆಂದು ತೆಗೆದಿರುವ 76 ಸಾರಾಯಿ ಪೌಚುಗಳ ಪೈಕಿ 30 ಪೌಚುಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ರಿಂದ 30 ಮತ್ತು ಒಂದು ಬಿಳಿ ಪ್ಲಾಸ್ಟಿಕ್ ಚೀಲವನ್ನು ಮು.ಮಾ-31 ಎಂದು ಗುರುತಿಸಲಾಯಿತು. ಆರೋಪಿತನು ಸಾರಾಯಿ ಸಾಗಾಣೆ ಮಾಡುತ್ತಿದ್ದ ಬೈಕ್ ನ ಪೋಟೊ ತೆಗೆದಿದ್ದು ಸದರಿ ಪೊಟೋಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಪೋಟೊಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಚಾಸಾ-10 ರವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಬಿ ರವರಿಂದಃ**

ನಾವು ಕರ್ತವ್ಯಕ್ಕೆ ನಿಯೋಜನೆಗೊಂಡ ಬಗ್ಗೆ ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಸರ್ಕಾರಿ ಜೀಪ ನಂಬರ್ ಕೆಎ 55 ಜಿ 6 ವಾಹನದಲ್ಲಿ ಗಸ್ತು ಹೋಗಿದ್ದೇವು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಠಾಣಾ ಜೀಪನ್ನು ಗಸ್ತು ನಿಮಿತ್ತ ತೆಗೆದುಕೊಂಡು ಹೋಗಬೇಕಾದರೆ ಅದನ್ನು ಠಾಣಾ ಡೈರಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಠಾಣಾ ಎಸ್ ಹೆಚ್ ಒ ರವರಿಗೆ ಸಂಬಂಧಿಸಿರುತ್ತದೆ ಎಂದು ನುಡಿಯುತ್ತಾರೆ. ಕುಂದೂರು ಗ್ರಾಮದ ಮಾರಮ್ಮನ ದೇವಸ್ಥಾನ ಜಾಗವು ಜನಸಂದಣಿ ಇರುವ ಜಾಗ ಎಂದರೆ ಸಾಕ್ಷಿಯು ಅಲ್ಲಿ ಜನ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಪರ ವಕೀಲರು ಸಾಕ್ಷಿಗೆ ನಿಮ್ಮ ಹೇಳಿಕೆಯಲ್ಲಿ ಚೀಲ ಎಂದು ಅಷ್ಟೇ ಹೇಳಿದ್ದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಎಂದು ಹೇಳಿಲ್ಲ ಎಂದರೆ ಸರಿ. ಅಮಾನತ್ತು ಮಹಜರ್ ಕ್ರಮವನ್ನು ಸ್ಥಳದಲ್ಲಿ ಜರುಗಿಸಲು ತೊಂದರೆ ಇತ್ತಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿಯು ಊರಿನಲ್ಲಿ ಹೆಚ್ಚು ಬೆಲೆಗೆ ಸಾರಾಯಿ ಪೌಚುಗಳನ್ನು ಮಾರಾಟ ಮಾಡುತ್ತಿದ್ದ ಬಗ್ಗೆ ನಿಮಗೆ ಮಾಹಿತಿ ಇತ್ತಾ ಎಂದು ಕೇಳಲಾಗಿ ಸಾಕ್ಷಿಯು ಚಾಸಾ-1 ರವರಿಗೆ ಇತ್ತು ಎಂದು ನುಡಿಯುತ್ತಾರೆ. ಆರೋಪಿಯನ್ನು ಸದರಿ ಸಾರಾಯಿ ಪೌಚುಗಳನ್ನು ಯಾವ ಮದ್ಯದ ಅಂಗಡಿಯಿಂದ ತಂದಿರುತ್ತಾನೆಂದು ವಿಚಾರ ಮಾಡಿರುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಮಾನತ್ತು ಮಹಜರ್ ನ್ನು ಜರುಗಿಸಿಲ್ಲ ಎಂದರೆ ಸಾಕ್ಷಿಯು ಅಮಾನತ್ತು ಮಹಜರ್ ಮಾಡುವ ಸಮಯದಲ್ಲಿ ನಾನು ಇದ್ದೆ ಆದರೆ ಅಮಾನತ್ತು ಮಹಜರ್ ಗೆ ನಾನು ಸಹಿ ಹಾಕಿಲ್ಲ ಎಂದು ನುಡಿಯುತ್ತಾರೆ. ಅಮಾನತ್ತು ಮಹಜರ್ ಗೆ ದಾಳಿಯಲ್ಲಿ ಪಾಲ್ಗೊಂಡ ಎಲ್ಲಾ ಸಾಕ್ಷಿದಾರರ ಸಹಿಯನ್ನು ಪಡೆಯುತ್ತಾರೆ ಎಂದರೆ ಸಾಕ್ಷಿಯು ನಾನು ಸಹಿ ಹಾಕಿಲ್ಲ ಎಂದು ನುಡಿಯುತ್ತಾರೆ. ಚಾಸಾ-4 ಮತ್ತು 5 ರವರನ್ನು ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ. ಸ್ಥಳ ಮಹಜರ್ ಗೆ ನಾನು ಮತ್ತು ಚಾಸಾ-1 ಭಾಗಿಯಾಗಿರಲಿಲ್ಲ ಠಾಣೆಯಲ್ಲಿ ಕುಳಿತು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಠಾಣೆಯ ಮುಖ್ಯಅಧಿಕಾರಿಯಾಗಿದ್ದು ಅವರಿಗೆ ಅನುಸರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯನ್ನು

ಚಾಸಾ-10 ರವರ ಮುಂದೆ ದಿನಾಂಕ 22.01.2019 ರಂದು ನೀಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತ್ಯಾ ಆರೋಪಿಯು ಅಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡುತ್ತಿರಲಿಲ್ಲ ಆತನನ್ನು ನಾನು ಚಾಸಾ-1 ಹಾಗೂ 3 ಸೇರಿ ಹಿಡಿದುಕೊಂಡಿರಲಿಲ್ಲ ಎಂದರೆಸ ರಿಯಲ್ಲ. ಮು.ಮಾ-1 ರಿಂದ 30 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಮು.ಮಾ-1 ರಿಂದ 30 ನ್ನು ಸೇರಿಸಿ ಆರೋಪಿತನ ವಿರುದ್ದ ಸುಳ್ಳು ಕೇಸು ದಾಖಲು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**